ಮಂಡ್ಯ ದಕ್ಷಿಣ	17	11
ನಾಗಮಂಗಲ	197	14
ಪಾಂಡವಪುರ	50	07
ಶ್ರೀರಂಗಪಟ್ಟಣ	04	05
ಒಟ್ಟು	614	102

ಆ. ನಾಗಮಂಗಲ ತಾಲ್ಲೂಕಿನಲ್ಲಿ ಪ್ರಸಕ್ತ ವರ್ಷದಲ್ಲಿ ತೊಳಲಿ, ಮೂಡಲಮಲ್ಲಹಳ್ಳಿ, ದೊಂದೆ ಮಾದಹಳ್ಳಿಯಲ್ಲಿ ತಲಾ ಒಂದು ಕೊಠಡಿಯಂತೆ ಪ್ರಾಥಮಿಕ ಶಾಲಾ ಕೊಠಡಿಗಳನ್ನು ನಾಗಮಂಗಲ ಉರ್ದು ಬಾಲಕಿಯರ ಪ್ರಾಥಮಿಕ ಶಾಲೆಗೆ ಎರಡು ಕೊಠಡಿಗಳನ್ನು ಹಾಗೂ ತಟ್ಟಹಳ್ಳಿ ಮತ್ತು ಹರದನಹಳ್ಳಿಯಲ್ಲಿ ತಲಾ ಒಂದು ಕೊಠಡಿಯಂತೆ ಪ್ರೌಢಶಾಲಾ ಕೊಠಡಿಗಳನ್ನು ನಿರ್ಮಾಣ ಮಾಡಲಾಗುವುದು.

ಇ. ಜಿಲ್ಲೆಯಲ್ಲಿ ಒಟ್ಟು 1089 ಪ್ರಾಥಮಿಕ ಶಾಲೆಗಳಿಗೆ 65 ಪ್ರೌಢಶಾಲೆಗಳಿಗೆ ಶೌಚಗೃಹ ಸೌಲಭ್ಯವಿರುವುದಿಲ್ಲ. ಪ್ರಸಕ್ತ ಸಾಲಿನಲ್ಲಿ 14 ಪ್ರಾಥಮಿಕ ಹಾಗೂ 35 ಪ್ರೌಢಶಾಲೆಗಳಿಗೆ ಶೌಚಗೃಹ ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಶಿವಮೊಗ್ಗ ತಾಲ್ಲೂಕಿನಲ್ಲಿ ವಯಸ್ಕರ ಶಿಕ್ಷಣಕ್ಕೆ ಹಣ ಬಿಡುಗಡೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 204(358)

ಸದಸ್ಯರ ಹೆಸರು: ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ)

ಉತ್ತರಿಸುವ ಸಚಿವರು: ಶ್ರೀ ಬಾಬುರಾವ್ ಚವ್ಹಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯಗಳು ಮತ್ತು ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಪ್ರಶ್ನೆ

ಅ) 1999-2000 ಹಾಗೂ 2000-01ನೇ ಸಾಲಿನಲ್ಲಿ ವಯಸ್ಕರ ಶಿಕ್ಷಣಕ್ಕೆ ಶಿವಮೊಗ್ಗ ತಾಲ್ಲೂಕಿಗೆ ಎಷ್ಟು ಹಣ ಬಿಡುಗಡೆಯಾಗಿದೆ?

ಆ) ಈ ಅನುದಾನದಲ್ಲಿ ಶಿವಮೊಗ್ಗ ವಿಧಾನಸಭೆ ಕ್ಷೇತ್ರದಲ್ಲಿ ಎಷ್ಟು ಜನರಿಗೆ

ಸಾಕ್ಷರರನ್ನಾಗಿ ಮಾಡಲಾಗಿದೆ? (ವಿವರ ನೀಡುವುದು).

ಉತ್ತರ

ಅ) ಬಿಡುಗಡೆಯಾಗಿಲ್ಲ.

ಆ) ಸಾಕ್ಷರತಾ ಆಂದೋಲನದಲ್ಲಿ (1991 ರಿಂದ 2000ದವರೆಗೆ) ಒಟ್ಟು 49,700 ಜನರನ್ನು ಸಾಕ್ಷರರನ್ನಾಗಿ ಮಾಡಲಾಗಿದೆ.

ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ಶಾಲಾ ಕಟ್ಟಡಗಳ ದುರಸ್ತಿಗೆ ಹಣ ಬಿಡುಗಡೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 206(360)

ಸದಸ್ಯರ ಹೆಸರು: ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ):

ಉತ್ತರಿಸುವ ಸಚಿವರು: ಶ್ರೀ ಎಚ್.ವಿಶ್ವನಾಥ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಪ್ರಶ್ನೆ

ಅ. ಸರ್ಕಾರ ಶಿವಮೊಗ್ಗ ವಿಧಾನ ಸಭಾ ಕ್ಷೇತ್ರಕ್ಕೆ 2000-2001 ಹಾಗೂ 2001-2002ನೇ ಸಾಲಿನಲ್ಲಿನ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಕಟ್ಟಡಗಳ ದುರಸ್ತಿಗೆ ಬಿಡುಗಡೆ ಮಾಡಲಾದ ಹಣವೆಷ್ಟು? (ವಿವರ ನೀಡುವುದು).

ಉತ್ತರ

ಅ. ರೂ.ಲಕ್ಷಗಳಲ್ಲಿ

	2000-01	2001-02
ಪ್ರಾಥಮಿಕ	8.73	1.20
ಪ್ರೌಢ	1.20	1.80

ಗಾಜನೂರು ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 207(362)